# ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು–560 001

================================================================

ದಿನಾಂಕ 27.09.2013ರಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಡಿ. ದೇವರಾಜ ಅರಸು ಭವನದಲ್ಲಿ ಮಧ್ಯಾಹ್ನ 2.00 ಗಂಟೆಗೆ ನಡೆದ 196ನೇ ನಿರ್ದೇಶಕ ಮಂಡಳಿಯ ಸಭಾ ನಡವಳಿಗಳು

<u>ಹಾಜರಾತಿ:</u>

| | | |
|---|---|---|
| 1. ಶ್ರೀ ಹೆಚ್. ಆಂಜನೇಯ<br>ಮಾನ್ಯ ಅಧ್ಯಕ್ಷರು<br>ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | – | ಅಧ್ಯಕ್ಷರು |
| 2. ಡಾ: ಇ. ವೆಂಕಟಯ್ಯ, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಇಲಾಖೆ | – | ಸದಸ್ಯರು |
| 3. ಶ್ರೀ ಎಸ್.ಎನ್. ಜಯರಾಂ, ಭಾ.ಆ.ಸೇ.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | – | ಸದಸ್ಯರು |
| 4. ಶ್ರೀ ನಾಗರಾಜ ಚವ್ಹಾಣ್<br>ವ್ಯವಸ್ಥಾಪಕ ನಿರ್ದೇಶಕರು<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ | – | ಸದಸ್ಯರು |
| 5. ಶ್ರೀ ರಾಮಚಂದ್ರಯ್ಯ<br>ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | – | ಸದಸ್ಯರು |
| 6. ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ | – | ಸದಸ್ಯರು |
| 7. ಡಾ. ಆರ್. ರಾಜು, ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು<br>ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | – | ಸದಸ್ಯ ಕಾರ್ಯದರ್ಶಿಗಳು |

<u>ಗೈರು ಹಾಜರಿ:</u>

1. ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
   ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ
   ಭಾರತ ಸರ್ಕಾರ, ನವದೆಹಲಿ

2. ನಿರ್ದೇಶಕರು
   ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ
   ಭಾರತ ಸರ್ಕಾರ, ನವದೆಹಲಿ

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ನಿಗಮದ ಮಾನ್ಯ ಅಧ್ಯಕ್ಷರು ಹಾಗೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಇತರೆ ಹಾಜರಿದ್ದ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. 196ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿ ಸಭೆ ಸಭೆಯನ್ನು ನಡೆಸಿಕೊಡಲು ನಿಗಮದ ಅಧ್ಯಕ್ಷರನ್ನು ಕೋರಿದರು ಅಲ್ಲದೇ ಸಭೆಯಲ್ಲಿ (quorum) ಇರುವುದನ್ನು ಖಾತ್ರಿಪಡಿಸಿ ಸಭೆ ನಡೆಸಬಹುದೆಂದು ನೀಡಿದ ಸಲಹೆಯಂತೆ ಮಾನ್ಯ ಅಧ್ಯಕ್ಷರು ಸಭೆ ನಡೆಸಿದಂತೆ ತಯಾರಿಸಿದ ವಿಷಯವಾರು ನಡವಳಿ.

**ವಿಷಯ ಸಂಖ್ಯೆ: 01:** 195ನೇ ನಿರ್ದೇಶಕರ ಮಂಡಳಿಯ ನಡವಳಿ ಅಂಗೀಕರಿಸುವ ಕುರಿತು.

ದಿನಾಂಕ:27.08.2013ರಂದು ನಡೆದ 195ನೇ ನಿರ್ದೇಶಕರ ಮಂಡಳಿಯು ವಿಷಯವಾರು ತೆಗೆದುಕೊಂಡ ತೀರ್ಮಾನದ ನಡವಳಿಯನ್ನು ಸಭೆಯು ಯಥಾವತ್ತಾಗಿ ಅಂಗೀಕರಿಸಿತು.

ವಿಷಯ ಸಂಖ್ಯೆ: 02: ಗಂಗಾಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಬಾಕಿ ಉಳಿದ 4608 ಕೊಳವೆಬಾವಿಗಳನ್ನು ಈ ಸಾಲಿನಲ್ಲಿ ಪರಿಷ್ಕೃತ ಘಟಕ ವೆಚ್ಚದಂತೆ ಕೊರೆಯುವ ಬಗ್ಗೆ ಸಭೆಯು ಪ್ರಾಥಮಿಕವಾಗಿ ಚರ್ಚಿಸಿ ಈ ಸಂಬಂಧ ಸಮಗ್ರವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಮುಂದಿನ ಸಭೆಗೆ ವಿವರವಾಗಿ ವಿಷಯವನ್ನು ಮಂಡಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಿತು.

ವಿಷಯ ಸಂಖ್ಯೆ: 03: ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಫಲಾನುಭವಿಗಳು ಪಡೆದ ಸಾಲ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ ಸಾಲದ ಭದ್ರತೆಗಾಗಿ ಪಡೆದ ಪೂರಕ ಹಾಗೂ ಇತರೇ ದಾಖಲೆಗಳನ್ನು ಹಿಂದಿರುಗಿಸುವ ಕುರಿತು ವಿಷಯವನ್ನು ಸವಿಸ್ತಾರವಾಗಿ ಸಭೆಯು ಚರ್ಚಿಸಿ ದಿನಾಂಕ:13-05-2013ರ ವರೆವಿಗೆ ನಿಗಮದ ವತಿಯಿಂದ ನೀಡಲಾಗಿದ್ದ ಸಾಲದ ಅಸಲು ಮತ್ತು ಬಡ್ಡಿಯನ್ನು ಸರ್ಕಾರವು ಪೂರ್ಣವಾಗಿ ಮನ್ನಾ ಮಾಡಿರುವುದರಿಂದ ಪ್ರತಿ ಫಲಾನುಭವಿಗಳಿಂದ ಪಡೆದಿರುವ ಈ ಕೆಳಕಂಡ ಪೂರಕ ಭದ್ರತೆಗಳನ್ನು ಹಿಂದುರುಗಿಸಲು ತೀರ್ಮಾನಿಸಿತು.

1. ಪೂರಕ ಭದ್ರತೆ: ನಿಗಮದಲ್ಲಿ ನೇರಸಾಲ ಯೋಜನೆಯಡಿ ಶೇ:10% ರಿಂದ ಶೇ 15% ಪೂರಕ ಭದ್ರತೆಯಾಗಿ ಎಲ್.ಐ.ಸಿ, ನಿಗದಿತ ಠೇವಣಿ, ಎನ್.ಎಸ್.ಸಿ ಇತ್ಯಾದಿಗಳನ್ನು ಪಡೆದು ನಿಗಮಕ್ಕೆ ಆಧಾರ ಮಾಡಿರುವುದನ್ನು ರದ್ದುಪಡಿಸಿ ಫಲಾನುಭವಿಗಳಿಗೆ ಹಿಂದಿರುಗಿಸಲು ತೀರ್ಮಾನಿಸಲಾಯಿತು.

2. ಹೈಪಾಥಿಕೇಷನ್ ರದ್ದುಪಡಿಸುವ ಬಗ್ಗೆ: ನಿಗಮದಿಂದ ನೀಡಿರುವ ಆಟೋ, ಕಾರು, ಟ್ರ್ಯಾಕ್ಟರ್ ಹಾಗೂ ಟ್ರೈಲರ್ ಮುಂತಾದ ವಾಹನಗಳು ನಿಗಮದ ಹೆಸರಿಗೆ ಹೈಪಾಥಿಕೇಷನ್ ಆತರುತ್ತವೆ. ಸದರಿ ಹೈಪಾಥಿಕೇಷನ್‌ನ್ನು ಕಾನೂನಿನ ಅನ್ವಯ ರದ್ದುಪಡಿಸಿ ದಾಖಲಾತಿಗಳನ್ನು ಹಿಂದಿರುಗಿಸಲು ತೀರ್ಮಾನಿಸಿತು.

3. ಭೂ ಒಡೆತನ ಯೋಜನೆಯಡಿ ಫಲಾನುಭವಿಗಳಿಗೆ ನೀಡಿರುವ ಜಮೀನನ್ನು ನಿಗಮದ ಹೆಸರಿಗೆ ಅಡಮಾನ ಮಾಡಿಕೊಂಡಿದ್ದು, ಈ ಸ್ವತ್ತನ್ನು ಫಲಾನುಭವಿಗಳು ಸಾಲ ಸಂಪೂರ್ಣ ಮರುಪಾವತಿ ಆದ ನಂತರವೂ 15 ವರ್ಷಗಳ ಕಾಲ ಪರಭಾರೆ ಮಾಡಬಾರದೆಂಬ ನಿಯಮವಿರುತ್ತದೆ. ಆದರೆ, ಸರ್ಕಾರ ಆದೇಶ ಸಂಖ್ಯೆ:ಸಕಇ 79 ಎಸ್‌ಡಿಸಿ 2012 ದಿನಾಂಕ:13.06.2012ರಲ್ಲಿ ಭೂ ಒಡೆತನ ಯೋಜನೆಯಡಿ ಮಂಜೂರು ಮಾಡಿದ ಜಮಿನನ್ನು ಯಾವುದೇ ಕಾರಣಕ್ಕೂ ಪರಬಾರೆ ಮಾಡುವುದನ್ನು ನಿಷೇದಿಸಿದೆ. ಆದ್ದರಿಂದ ಭೂ ಒಡೆತನ ಯೋಜನೆಯಡಿ ಜಮೀನು ಪಡೆದ ಫಲಾನುಭವಿಗಳ ಜಮೀನಿನ ಮೇಲಿನ ಆಧಾರವನ್ನು ರದ್ದುಪಡಿಸಿದರೆ ಫಲಾನುಭವಿಗಳು ಜಮೀನನ್ನು ಮಾರಿಕೊಳ್ಳುವ ಸಾಧ್ಯತೆಗಳು ಇರುವುದರಿಂದ, ಅಡಮಾನ ರದ್ದುಪಡಿಸದೇ ಮೂಲ ದಾಖಲೆಗಳನ್ನು ವಾಪಸ್ಸು ಮಾಡುವ ಪೂರ್ವದಲ್ಲಿ, **"ಜಮಿನನ್ನು ಯಾವುದೇ ಕಾರಣಕ್ಕೂ ಪರಬಾರೆ ಮಾಡುವುದನ್ನು ನಿಷೇದಿಸಿದೆ"** ಎಂಬ ಷರಾದೊಂದಿಗೆ ನಮೂದಿಸಿ ಫಲಾನುಭವಿಗಳಿಗೆ ಹಿಂದಿರುಗಿಸಲು ಒಪ್ಪಲಾಯಿತು.

4. ಮೈಕ್ರೋ ಕ್ರೆಡಿಟ್ ಹಾಗೂ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗಳಡಿ ಬೇರೆ ವಿವಿಧ ಇಲಾಖೆಗಳಿಂದ ಬಂದಿರುವ ಸಹಾಯಧನವನ್ನು ಬ್ಯಾಕ್ ಎಂಡ್ ಸಬ್ಸಿಡಿ ಆಗಿ ನಿಗಮದಲ್ಲಿ

ಇಟ್ಟುಕೊಂಡಿದ್ದು, ಸದರಿ ಬಾಬ್ತು ನೀಡಿರುವ ಸಾಲವು ಪೂರ್ಣವಾಗಿ ಮನ್ನಾವಾಗಿರುವುದರಿಂದ ಸದರಿ ಬ್ಯಾಕ್ ಎಂಡ್ ಸಬ್ಸಿಡಿಯನ್ನು ನಿಗಮದ ಆಧಾಯವೆಂದು ಪರಿಗಣಿಸಲು ತೀರ್ಮಾನಿಸಿತು.

5. ಹೊಸದಾಗಿ 2012-13ನೇ ಸಾಲಿನಲ್ಲಿ ನೇರಸಾಲ ಯೋಜನೆ ಮತ್ತು ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಸಾಲ ಮಂಜೂರು ಮಾಡಿರುವ ಹಣವು ಫಲಾನುಭವಿಗಳು ವಾಹನ ಖರೀದಿಸಿದ್ದು ಈ ಸಾಲಗಳನ್ನು ಸಹ ಮನ್ನಾ ಮಾಡಲಾಗಿದೆ. ಅದರೆ ಈ ವಾಹನಗಳನ್ನು ನಿಗಮದ ಹೆಸರಿಗೆ ಹೈಪಾಥಿಕೇಷನ್ ಮಾಡಿಕೊಳ್ಳಲಾಗಿದ್ದು ಹೈಪಾಥಿಕೇಷನ್ ರದ್ದುಪಡಿಸಿದರೆ ಫಲಾನುಭವಿಗಳು ವಾಹನವನ್ನು ಮಾರಿಕೊಳ್ಳುವ ಸಾಧ್ಯತೆ ಇರುವುದರಿಂದ ಹಾಗೂ ಫಲಾನುಭವಿಗಳ ಹಿತದೃಷ್ಟಿಯಿಂದ ಸದರಿ ವಾಹನಗಳಿಗೆ 4 ರಿಂದ 5 ವರ್ಷದವರೆಗೆ ದಿನಾಂಕ ನಿಗದಿಪಡಿಸಿ ನಿಗಮದ ಹೆಸರಿನಲ್ಲಿಯೇ ಹೈಪಾಥಿಕೇಷನ್ ಮುಂದುವರೆಸುವುದು ಸೂಕ್ತವೆಂದು ತೀರ್ಮಾನಿಸಿತು. ಅಲ್ಲದೇ 2012-13ನೇ ಸಾಲಿನ ಪ್ರಕರಣಗಳನ್ನು ಹೊರತುಪಡಿಸಿ ಹಿಂದಿನ ಸಾಲಿನ ಎಲ್ಲಾ ಪ್ರಕರಣಗಳಿಗೂ ಹೈಪಾಥಿಕೇಷನ್ ರದ್ದುಪಡಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 04: ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಮೋದನೆ ನೀಡುವ ಬಗ್ಗೆ. ಈ ವಿಷಯವನ್ನು ಮುಂದಿನ ಆಡಳಿತ ಮಂಡಳಿಗೆ ಮಂಡಿಸುವಂತೆ ಮುಂದೂಡಲಾಯಿತು.

**ವಿಷಯ ಸಂಖ್ಯೆ: 05:** ನಿಗಮದ ಸೇವೆಯಲ್ಲಿ ವಿಲೀನಗೊಂಡ ಮೈಸೂರು ಲ್ಯಾಂಪ್ಸ್ ಮತ್ತು ಕೆ.ಟಿ.ಎಲ್. ಸಂಸ್ಥೆಯ ನೌಕರರಿಗೆ ಸೇವಾ ಹಿರಿತನ ಮತ್ತು ವೇತನ ನಿಗದಿಪಡಿಸುವ ವಿಷಯದಲ್ಲಿ ಆಡಳಿತ ಮಂಡಳಿಯು ವಿವರವಾಗಿ ಚರ್ಚಿಸಿತು. ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆಃಸಉಇ/06/ಎಪಿಯು/2013, ದಿನಾಂಕಃ24-04-2013ರಲ್ಲಿನ ಪತ್ರದಂತೆ ದಿನಾಂಕಃ11-02-2003ಕ್ಕಿಂತ ಮುಂಚಿತವಾಗಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ನಿಯೋಜನೆ ಮೇಲೆ ಬಂದು ತದನಂತರ ನಿಗಮದ ಸೇವೆಯಲ್ಲಿ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿರುವ ಮೈಸೂರು ಲ್ಯಾಂಪ್ಸ್ ಮತ್ತು ಕೆ.ಟಿ.ಎಲ್. ಸಂಸ್ಥೆಗೆ ಸೇರಿದ ಈ ಕೆಳಕಂಡ 12 ನೌಕರರುಗಳ ಸೇವಾ ಹಿರಿತನವನ್ನು, ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ (ಬಿಪಿಇ) 38 ಎಆರ್‌ಯು 2002, ದಿನಾಂಕ: 24.02.2003ರನ್ವಯ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸೇವೆಯಲ್ಲಿ ದಿನಾಂಕ:24-02-2003ರಿಂದಲೇ ಜಾರಿಗೆ ಬರುವಂತೆ, ಸದರಿ ನೌಕರರುಗಳಿಗೆ ಯಾವುದೇ ತರಹದ ಆರ್ಥಿಕ ಸೌಲಭ್ಯವಿಲ್ಲದೇ ಸೇವಾ ಹಿರಿತನವನ್ನು ನೀಡಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತದೆ. ಆದುದರಿಂದ ಈ ಕೆಳಕಂಡ 12 ನೌಕರರುಗಳ ಸೇವೆಯನ್ನು ನಿಗಮದಲ್ಲಿ ವಿಲೀನಗೊಳಿಸಿ ಈ ಹಿಂದೆ ಪರಿಗಣಿಸಿದ್ದ ಸೇವಾ ಹಿರಿತನದ ದಿನಾಂಕಃ04-03-2009ನ್ನು ಪರಿಷ್ಕರಿಸಲು ತೀರ್ಮಾನಿಸಲಾಯಿತು.

| ಕ್ರ ಸಂ. | ಹೆಸರು | ಹುದ್ದೆ | ಮಾತೃ ಸಂಸ್ಥೆ | ಈ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ |
|---|---|---|---|---|
| 1 | ಸಿ. ತಿಮ್ಮಯ್ಯ | ವಾಹನ ಚಾಲಕರು | ಮೈಸೂರು ಲ್ಯಾಂಪ್ಸ್ | 19.05.1997 |
| 2 | ವಿ. ಮಹಾಲಿಂಗಯ್ಯ | ದ್ವಿ.ದ.ಸ. | - " - | 08.02.2001 |
| 3 | ಎನ್. ಕುಂಬಯ್ಯ | ದ್ವಿ.ದ.ಸ. | - " - | 08.02.2001 |
| 4 | ಆರ್. ಕುಮಾರಸ್ವಾಮಿ | ಪ್ರ.ದ.ಸ. | - " - | 08.02.2001 |
| 5 | ಕೆ.ವಿ.ವೆಂಕಟರಮಣ | ಪ್ರ.ದ.ಸ. | - " - | 06.08.2001 |
| 6 | ಟಿ. ನರಸಿಂಹ | ದ್ವಿ.ದ.ಸ. | - " - | 28.09.2001 |
| 7 | ಬಿ.ಟಿ.ಚಂದ್ರಕಾಂತ್ | ದಲಾಯತರು | ಕೆ.ಟಿ.ಎಲ್. | 13.12.1996 |
| 8 | ಬಿ. ರಾಮಕೃಷ್ಣ | ದ್ವಿ.ದ.ಸ. | - " - | 26.08.1997 |
| 9 | ಪ್ರಫುಲ್ಲಿತ ಕುಮಾರಿ | ಪ್ರ.ದ.ಸ. | - " - | 03.09.1997 |
| 10 | ಟಿ.ಆರ್.ರಂಗನಾಥ್ | ದಲಾಯತರು | - " - | 22.09.1997 |
| 11 | ವೈ.ವಿ.ರಾಮರೆಡ್ಡಿ | ದ್ವಿ.ದ.ಸ. | - " - | 12.08.1998 |
| 12 | ಸಂಪತ್‌ಕುಮಾರ್ | ದ್ವಿ.ದ.ಸ. | - " - | 14.09.2000 |

ಮೇಲೆ ವಿವರಿಸಿದ ಸಕಾರಣಗಳಿಂದ ಕ್ರಮ ಸಂಖ್ಯೆ 1 ರಿಂದ 12ರ ವರೆಗಿನ ನೌಕರರುಗಳಿಗೆ ಸೇವಾ ಹಿರಿತನವನ್ನು ಯಾವುದೇ ತರಹದ ಆರ್ಥಿಕ ಸೌಲಭ್ಯಗಳಿಲ್ಲದೆ ದಿನಾಂಕಃ24-02-2003ರಿಂದಲೇ ಅನ್ವಯವಾಗುವಂತೆ ಪರಿಗಣಿಸಲು ಆಡಳಿತ ಮಂಡಳಿಯು ತೀರ್ಮಾನಿಸಿತು.

ವಿಷಯ ಸಂಖ್ಯೆ: 06: ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯ ನೇರಸಾಲ ಯೋಜನೆಯಡಿ ನೀಡುತ್ತಿರುವ ಸಾಲಸೌಲಭ್ಯಗಳಿಗೆ ಮಂಜೂರಾತಿ ಆದೇಶದಲ್ಲಿ ವಿಧಿಸುತ್ತಿರುವ ಕೆಲವು ನಿಬಂಧನೆಗಳನ್ನು ಭಾಗಶ: ಸಡಿಲಿಸುವ ವಿಷಯದಲ್ಲಿ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆದು ಒಂದು ಸಮಗ್ರವಾದ ಕರಡು ಕರಾರು ಮಾದರಿಯನ್ನು ತಯಾರು ಮಾಡಿ ಮುಂದಿನ ಆಡಳಿತ ಮಂಡಳಿಗೆ ಮಂಡಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 07: Approval of Director's Report. ಈ ವರದಿಯನ್ನು ಸವಿಸ್ತಾರವಾಗಿ ಚರ್ಚಿಸಿ ಸಭೆಯು ಯಥಾವತ್ತಾಗಿ ಒಪ್ಪಿ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ: 08: ವೈದ್ಯಕೀಯ ವೆಚ್ಚ ಮರುಪಾವತಿ. ಈ ವಿಷಯವನ್ನು ವಿವರವಾಗಿ ಚರ್ಚಿಸಿದ ಸಭೆಯು ವ್ಯವಸ್ಥಾಪಕ ನಿರ್ದೇಶಕರಿಗೆ ಹಾಲಿ ಇರುವ ಮಂಜೂರಾತಿ ಅಧಿಕಾರವನ್ನು ರೂ.5,000/- ದಿಂದ ರೂ.50,000/-ಗಳ ವರೆಗೆ ಹೆಚ್ಚಿಸಿ ಮಂಜೂರಾತಿ ನೀಡುವ ಅಧಿಕಾರ ನೀಡಿ ಒಪ್ಪಿತು. ಅಲ್ಲದೇ ರೂ.50,000/- ಗಳಿಗಿಂತಲೂ ಹೆಚ್ಚು ವೆಚ್ಚವುಳ್ಳ ವೈದ್ಯಕೀಯ ಬಿಲ್ಲುಗಳನ್ನು ಆಡಳಿತ ಮಂಡಳಿಯ ಅನುಮೋದನೆ ಪಡೆದು ಮಂಜೂರು ಮಾಡಲು ವ್ಯವಸ್ಥಾಪಕ ನಿರ್ದೇಶಕರು ಕ್ರಮ ಕೈಗೊಳ್ಳಲು ತೀರ್ಮಾನಿಸಿತು.

ವಿಷಯ ಸಂಖ್ಯೆ: 09: ವೈದ್ಯಕೀಯ ಕಾರಣದ ಮೇಲೆ ನಿವೃತ್ತಿಗೊಂಡ ಶ್ರೀ ಶಾಮರಾಯ, ದಲಾಯಿತರು ಇವರ ಮಗ ಶ್ರೀ ರೇವಣಸಿದ್ದಪ್ಪ ರವರಿಗೆ ಅನುಕಂಪದ ಆಧಾರದ ಮೇಲೆ ನಿಗಮದಲ್ಲಿ ನೌಕರಿ ನೀಡುವ ಬಗ್ಗೆ ಪ್ರಕರಣವನ್ನು ಸವಿಸ್ತಾರವಾಗಿ ಚರ್ಚಿಸಿದ ಸಭೆಯು ಶ್ರೀ ಶ್ಯಾಮರಾಯರ ಇತ್ತೀಚಿನ ಆರೋಗ್ಯದ ಸ್ಥಿತಿಯ ಬಗ್ಗೆ ಸಂಬಂಧಿಸಿದ ನಿಗಮದ ಅಧಿಕಾರಿಗಳಿಂದ ಸ್ಥಳ ವೀಕ್ಷಣೆ ಮಾಡಿಸಿ ವರದಿ ಪಡೆದು ಮುಂದಿನ ಸಭೆಗೆ ಮಂಡಿಸುವಂತೆ ತೀರ್ಮಾನಿಸಿತು. ಅಲ್ಲದೇ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಶ್ರೀ ಶ್ಯಾಮರಾಯ ರವರು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಹಾಜರಿರುವಂತೆ ತಿಳಿಸಲು ಸಭೆಯು ತೀರ್ಮಾನಿಸಿತು.

ಹೆಚ್ಚುವರಿ ವಿಷಯಃ ನಿಗಮದ ಅಧ್ಯಕ್ಷರ ಆಪ್ತ ಶಾಖೆಗೆ ಸಹಾಯಕರನ್ನು ನೇಮಿಸುವ ಕುರಿತು, ಸರ್ಕಾರಿ ಅಧಿಸೂಚನೆ ಸಂಖ್ಯೆಃಸಕಇ 114 ಎಸ್‌ಡಿಸಿ 2013, ದಿನಾಂಕಃ22-07-2013ರಂತೆ ಮಾನ್ಯ ಶ್ರೀ ಹೆಚ್.ಆಂಜನೇಯ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಇವರಿಗೆ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿರುವುದರಿಂದ ಮಾನ್ಯ ಅಧ್ಯಕ್ಷರ ಆಪ್ತ ಶಾಖೆಗೆ ಸರ್ಕಾರಿ ಆದೇಶ ಸಂಖ್ಯೆಃ 41 ಸಿಸನೇ 2002, ದಿನಾಂಕಃ17-06-2002ರನ್ವಯ ಅಧ್ಯಕ್ಷರ ಅಧಿಕಾರ ಅವಧಿಗೆ "ಸಿ" ವೃಂದದ ಇಬ್ಬರು ಸಹಾಯಕರನ್ನು ನೇಮಿಸಲು ಅವಕಾಶವಿರುವುದರಿಂದ ಹಾಗೂ ಆರ್ಥಿಕ ಇಲಾಖೆ ಅನಧೀಕೃತ ಟಿಪ್ಪಣಿ ಸಂಖ್ಯೆಃಆಇ 652 ಸೇ-1 2012, ದಿನಾಂಕಃ10-07-2012ರಲ್ಲಿ ನಿಗದಿಪಡಿಸಿದ ರೂ.16,000/-ಗಳ ಸಂಚಿತ ಮಾಸಿಕ ವೇತನದಂತೆ ಈ ಕೆಳಗೆ ವಿವರಿಸಿರುವವರನ್ನು ಮಾನ್ಯ ಅಧ್ಯಕ್ಷರ ಆಪ್ತ ಶಾಖೆಗೆ ಅಧ್ಯಕ್ಷರ ಅವಧಿಗೆ ಸೀಮಿತವಾಗುವಂತೆ ಸಂಚಿತ ವೇತನದ ಮೇಲೆ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಿ ಅನುಮತಿ ನೀಡಿತು.

1. ಶ್ರೀ ನರಸಿಂಹಮೂರ್ತಿ.ಸಿ ಬಿನ್ ಚಿಕ್ಕಪ್ಪಯ್ಯ.ಎನ್, ನಂ.7/2, ವೈಯಾಲಿಕಾವಲ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560 003.
2. ಶ್ರೀ ಭರತ್‌ಬಾಬು, ನಂ.220, ಯಾದಾಳಂನಗರ, ಸುಬ್ರಮಣ್ಯಪುರ ಮುಖ್ಯರಸ್ತೆ, ಬೆಂಗಳೂರು-560 061.

ನಿರ್ದೇಶಕರ ಮಂಡಳಿ ಸಭೆ ನಡವಳಿಯ ಕರಡು ಪ್ರತಿಯನ್ನು ಅನುಮೋದನೆಗಾಗಿ ಮಂಡಿಸಿದೆ.

-ಸಹಿ-
(ಹೆಚ್.ಆಂಜನೇಯ)
ಅಧ್ಯಕ್ಷರು
ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

10/x/2013
(ಡಾ:ಆರ್.ರಾಜು)
ವ್ಯವಸ್ಥಾಪಕ ನಿರ್ದೇಶಕರು
ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ